ಇಸ್ತಿಹಾರ್, ನಂ. 848—ಜ್ಯಾ. ತಾರೀಖು 27ನೆ ಅಕ್ಟೋಬರ್ 1903.

ಸನ್1892ನೆ ಇಸವಿಯ IVನೆ ನಂಬರ್ ಮೈಸೂರು ಕಾರ್ಖಾನೆಗಳ ರೆಗ್ಯುಲೇಷನ್ 18ನೆ ಸೆಕ್ಷನ್‌ನಿನ 4ನೆ ಪ್ರಕರಣವನ್ನು ಅನುಸರಿಸಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಮೇಲ್ಕಂಡ 18ನೆ ಸೆಕ್ಷನ್‌ನಿನ 2ನೆ ಪ್ರಕರಣದ ಪ್ರಕಾರ ತಮಗಿರುವ ಅಧಿಕಾರ ಚಲಾವಣೆಯಲ್ಲಿಯೂ ಮತ್ತು 1901ನೆ ಇಸವಿ ಜನವರಿ 4ನೆ ತಾರೀಖಿನ ನಂ. 8627—ಲೆಗಿಸ್ 70ನೆ ನೋಟಿಫಿಕೇಷನ್‌ಗೆ ಬದಲಾಗಿಯೂ ಸಹ ಮಾಡಬೇಕೆಂದಿರುವ ಇದರಡಿ ವಿವರಿಸಿರುವ ರೂಲಿನ ಮಸೂದೆಯನ್ನು ಸಕಲ ಜನರಿಗೂ ತಿಳಿಯಪಡಿಸುವ ಬಗ್ಗೆ ಪ್ರಕಟಿಸಿರುತ್ತಾರೆ. ಮೈಸೂರು ಗೆಜೆಟ್ಟಿನಲ್ಲಿ ಈ ಇಸ್ತಿಹಾರ್ ಫಾಯಿಷ್ ಆದ ಯ ರಡು ತಿಂಗಳು ಕಳೆದ ನಂತರ ಈ ಮಸೂದೆಯನ್ನು ಸರ್ಕಾರದವರು ವಿಚಾರಕ್ಕೆ ತೆಗೆದುಕೊಳ್ಳುತ್ತಾರೆ:—

ಕಾರ್ಖಾನೆಗಳ ಸ್ವಾಧೀನದಲ್ಲಿರುವ ಪ್ರತಿ ಬಬ್ಬನೂ ಈ ಕೆಳಗೆ ತೋರಿಸಿರುವ ತಖ್ತೆಗಳನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ರವಾನಿಸತಕ್ಕದ್ದು:

I. ಪ್ರತಿ ವರುಷದ ಜನವರಿ 15ನೆ ತಾರೀಖಿನ ದಿನ ಅಥವಾ ತತ್ಪೂರ್ವ, ಈ ಕೆಳಗೆ ತೋರಿಸಿರುವ ನಮೂನೆಯಲ್ಲಿ ಬಂದು ಸಾಲ್‌ರ್ಯೂಡೆ ತಖ್ತೆಯನ್ನು:—

| ಕಾರ್ಖಾನೆಯು ಮತ್ತು ಇರತಕ್ಕ ಸ್ಥಳ. | ಯಜಮಾನನ ಅಥವಾ ಸ್ವಾಧೀನದಾರನ ಹೆಸರು. | ಮ್ಯಾನೇಜರ ಹೆಸರು. ಕೆಲಸದ ಸ್ಥಳದ. | ಸಹಾಯಕನಾದ ಜಲ್ಲೆ ನಾಡು ಊರು ಸ್ಥಾನ ಸೇರಿಕೆ ಸ್ಥಳ. | ಸರಾಸರಿ ಪ್ರತಿನಿತ್ಯವೂ ಕೆಲಸ ಮಾಡತಕ್ಕವರ ಸಂಖ್ಯೆ. | | | | ಕಾರ್ಖಾನೆಯಲ್ಲಿ ಬದಲು ಯಿಸಿಕೊಂಡ ಕೆಲಸ ಮಾಡಲ್ಪಡುತ್ತಿರುವ ಗಣ್ಯ ಕೆಲಸ ನಿಲ್ಲಿಸಲ್ಪಡುತ್ತಿರುವ ಯಂತ್ರಗಳ ಕುದುರೆ ಸತ್ತಿ ಯಷ್ಟು | ಉದಿಭೈವಾದಾಗಲಿ ಇನ್ಯಾವ ಸಾರಿಯಾ ಗಲೇ ಸೂರ್ಯ ರಜದಿನಗಳಂದಿ ಅಥವಾ ರೆಗ್ಯುಲೇಷನ್ನಿನ ಸೆಕ್ಷನ್ 5 (1) ಪ್ರಕಾರ ಕಾರ್ಖಾನೆಯು ಬಿದ್ದಿರುವಾರದ ದಿನ ಕೆಲಸ ನಡೆಸುವ ವಿಷಯದಲ್ಲಿನ ರೂಲಿನಿಂದ ವಿನಾಯ್ತಿ ಪಡೆದ ಸಮಯ. | ಷರಾ. |
|---|---|---|---|---|---|---|---|---|---|
| | | | | ಗಂಡಸರು. | ಹೆಂಗಸರು. | ಗಂಡಸರು. | ಹೆಂಗಸರು. | | |
| | | | | | | | | | |

N. B.—ದಿನಂಪ್ರತಿ ಕೆಲಸ ಮಾಡುವ ಹುಡುಗರ ಸಂಖ್ಯೆಯನ್ನು ಕಾರ್ಖಾನೆಯಲ್ಲಿಟ್ಟಿರುವ ಹುಡುಗರ ರಿಜಿಸ್ಟರಿನಿಂದ ತೆಗೆದುಕೊಳ್ಳಬೇಕು.

II. ಈ ಕೆಳಗಿನ ನಮೂನೆಯಲ್ಲಿ ಅಳತೆ ಮತ್ತು ವಿಸ್ತೀರ್ಣವನ್ನು ತೋರಿಸುವ ತಖ್ತೆಯನ್ನು:—

| ಕಾರ್ಖಾನೆಯು ಹೆಸರು ಮತ್ತು ಇರತಕ್ಕ ಸ್ಥಳ. | ಸ್ವಾಧೀನದಲ್ಲಿರುವವರ ಹೆಸರು. | ಕಾರ್ಖಾನೆಯಲ್ಲಿರುವ ಪ್ರತಿ ಬಂದು ಚಿಕ್ಕ ಮನೆಯು ಅಳತೆ ಮತ್ತು ಘನ ಆಕಾರ. | ಹಿಂದಿನ ಕಾಲಂನಲ್ಲಿ ತೋರಿಸಿರುವ ಯಾವ ದಾವರೊಂದು ಚಿಕ್ಕ ಮನೆಗಳಲ್ಲಿ ಯಂತ್ರಗಳು ಅಥವಾ ಇತರ ಭೂಸ್ಥಾಪಿತ ವಸ್ತುಗಳಿರುವ ಚಿಕ್ಕ ಮನೆಯು ನೆಲದ ಅಳತೆ. | ಷರಾ. |
|---|---|---|---|---|
| | | | | |

ಮೇಲ್ಕಂಡ ತಖ್ತೆಯು ಪ್ರತಿ ಬಂದು ಕಾರ್ಖಾನೆಯು ರೆಗ್ಯುಲೇಷನ್ ಅನುಸರಿಸಿ ಮೊದಲು ರಿಜಿಸ್ಟರ್ ಆದ ಕೂಡಲೇ ಕಳುಹಿಸಲ್ಪಡತಕ್ಕದ್ದು. ಮತ್ತು ತದನಂತರ ಕಾರ್ಖಾನೆಯಲ್ಲಿ ಅದರ ಯಾವದೊಂದು ಚಿಕ್ಕಮನೆಯ ಅಳತೆ ಅಥವಾ ಘನ ಆಕಾರಗಳು ಅಥವಾ ಯಂತ್ರಗಳು ಅಥವಾ ಇತರ ಭೂಸ್ಥಾಪಿತವಾದ ವಸ್ತುಗಳು ಇರತಕ್ಕ ಚಿಕ್ಕಮನೆಗಳ ಅಳತೆಗಳಿಗೆ ಕುಂದಕವಾಗುವ ಯಾವ ಬದಲಾವಣೆ ಮಾಡಿದಾಗಲೂ ಕಳುಹಿಸಲ್ಪಡತಕ್ಕದ್ದು.

III. ಪ್ರತಿ ಬಂದು ಕ್ಯಾಲೆಂಡರ್ ತಿಂಗಳ ಆಖೈರಿನೊಳಗಾಗಿ ಮುಂದಿನ ತಿಂಗಳಿನಲ್ಲಿ ಕಾರ್ಖಾನೆಯು ಮುಚ್ಚಲ್ಪಡುವ ಎಲ್ಲಾ ದಿನಗಳನ್ನು ತೋರಿಸುವ ತಖ್ತೆ. ಈ ತಖ್ತೆಯನ್ನು ತಖ್ತೆಲಿ ತೋರಿಸುವ ಹಿಂದಿನ ತಿಂಗಳಲ್ಲಿ ಕಾರ್ಖಾನೆಯಲ್ಲಿ ಕೆಲಸ ನಡೆದರೂ ನಡಿಯದೆ ಇದ್ದರೂ ರವಾನಿಸತಕ್ಕದ್ದು.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯರ್,
ಫಾರ್ ಜನರಲ್ ಮತ್ತು ರೆವೆನ್ಯೂ ಇಲಾಖೆಗಳ ಸೆಕ್ರಿಟರಿ.

Mysore Government Central Press, Bangalore—1203.